ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2958444
ಸಂಪುಟ-21 ಸಂಚಿಕೆ-12 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ : ಮಹಾಸಭೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇದರ 2020–2021ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 05.12.2021 ರವಿವಾರ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ನೆರವೇರಿತು. ಶ್ರೀಮತಿ ಜಯಲಕ್ಷ್ಮಿ ಮುರಳೀಧರ್ ರಾವ್ ಪ್ರಾರ್ಥನೆಗೈದರು. ವರದಿ ವರ್ಷದಲ್ಲಿ ಅಗಲಿದ ನಮ್ಮ ಸಮಾಜದ ಹಿರಿಯರ ಬಗ್ಗೆ ಕಾರ್ಯದರ್ಶಿ ಅರವಿಂದ ಕುಮಾರ್ ಮಾತನಾಡಿದರು. ಮೌನ ಪ್ರಾರ್ಥನೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿಯವರು 2020–21ನೇ ಸಾಲಿನ ನೋಟೀಸನ್ನು ಓದಿ ಅಂಗೀಕಾರ ಪಡೆದರು. ನಂತರ ಅವರು 2019–20ರ ಸಾಲಿನ ಮಹಾಸಭೆಯ ವರದಿ ಮಂಡನೆ ಮಾಡಿ ಸಭೆಯ ಅಂಗೀಕಾರ ಪಡೆದರು. ಪ್ರಸ್ತುತ ವರ್ಷದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ವಿಸ್ತೃತವಾದ ಚರ್ಚೆಯ ಬಳಿಕ ಸಭೆಯು ಚಟುವಟಿಕೆಗಳ ವರದಿಯನ್ನು ಅನುಮೋದಿಸಿತು. 2020–21ನೇ ವರ್ಷದ ಆಯವ್ಯಯ ಮತ್ತು ಆಸ್ತಿ ಜವಾಬ್ದಾರಿ ತ:ಖ್ತೆಗಳ ಪರಿಶೋಧಿತ ವರದಿಯನ್ನು ಕಾರ್ಯದರ್ಶಿಯವರೆ ಮಂಡಿಸಿದರು. ಪ್ರಶ್ನಾವಳಿಯಲ್ಲಿ ಸದಸ್ಯರಾದ ಸುಧಾಕರ್ ರಾವ್, ವಸಂತ ರಾವ್ ಕರಂಬಳ್ಳಿ, ಪ್ರವೀಣ್ ರಾವ್ ಕುಕ್ಕಿಕಟ್ಟೆ, ಪೆರ್ಡೂರು ಹರಿನಾರಾಯಣ ಭಂಡಿ, ಕೃಷ್ಣರಾವ್ ಉಂಡಾರು, ಪ್ರಫುಲ್ಲಚಂದ್ರ ರಾವ್, ವೈ. ಮೋಹನ್ ರಾವ್ ಭಾಗವಹಿಸಿದ್ದರು. ಸಂಘದ ಅಧ್ಯಕ್ಷರು, ಕಾರ್ಯದರ್ಶಿಯವರು ಹಾಗೂ ನಿರ್ದೇಶಕ ಮಂಡಳಿಯವರು ಸೂಕ್ತ ಹಾಗೂ ಸಮಾಧಾನಕರ ಉತ್ತರವನ್ನು ನೀಡಿದರು. ಮುಂದಿನ ವರ್ಷದ ಲೆಕ್ಕ ಪರಿಶೋಧಕರಾಗಿ ಶ್ರೀಮತಿ ವರ್ಷಾ ಇವರನ್ನು ನೇಮಿಸಲಾಯಿತು. ಕಾರ್ಯದರ್ಶಿಯವರಾದ ಅರವಿಂದ ಕುಮಾರ್ ಧನ್ಯವಾದ ಸಲ್ಲಿಸಿದರು. ವೇದಿಕೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಕೋಶಾಧಿಕಾರಿ ಸಹಿತ ಎಲ್ಲಾ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಮುಂದಿನ 3 ವರ್ಷಗಳಿಗೆ ಆಡಳಿತ ಮಂಡಳಿಯ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳಾದ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರು ಹಾಗೂ ಗೌರವ ಸಲಹೆಗಾರರಾದ ಸಿ.ಎಸ್.ರಾವ್ ಇವರಿಗೆ ವೇದಿಕೆಯನ್ನು ನೀಡಲಾಯಿತು. ಅವರು ನಾಮಪತ್ರ ಸ್ವೀಕಾರ, ನಾಮಪತ್ರ ಪರಿಶೀಲನೆ, ಮತಪತ್ರ ತಯಾರಿ, ಮತದಾನದ ಕಾರ್ಯಕ್ರಮ, ಮತ ಎಣಿಕೆ ಮುಂತಾದ ಎಲ್ಲಾ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿಕೊಟ್ಟರು.

ಚುನಾವಣಾ ಸಹಾಯಕರಾಗಿ ಮಾಜಿ ಅಧ್ಯಕ್ಷರೂ, ಗೌರವ ಸಲಹೆಗಾರರೂ ಆದ ವೈ. ಭುವನೇಂದ್ರ ರಾವ್ ಹಾಗೂ ಶ್ರೀ ಶಾರದಾ ಪತ್ರಿಕೆಯ ಪ್ರಧಾನ ಸಂಪಾದಕರೂ, ನಿಕಟಪೂರ್ವ ಉಪಾಧ್ಯಕ್ಷರೂ ಆದ ಡಾ। ಸುದರ್ಶನ್ ರಾವ್‌ರವರು ಪೂರ್ಣಪ್ರಮಾಣದ ಸಹಕಾರವನ್ನು ನೀಡಿದರು. ಮತ ಎಣಿಕೆ ಪ್ರಕ್ರಿಯೆಯಲ್ಲಿ ಪ್ರಕಾಶ್ ರಾವ್ ವೈ., ಡಾ। ಸಂತೋಷ್ ರಾವ್ ಚಿಟ್ಪಾಡಿ, ಪಟ್ಟಾಭಿರಾಮ ರಾವ್, ಕೃಷ್ಣರಾವ್, ದಿನೇಶ್ ರಾವ್, ವ್ಯಾಸರಾವ್ ಕಲ್ಮಂಜೆ, ಕೃಷ್ಣಮೂರ್ತಿ, ಮೋಹನ್ ದೇವ್, ಪ್ರವೀಣ್ ರಾವ್‌ರವರು ಸಹಕರಿಸಿದರು.

27 ನಿರ್ದೇಶಕರ ಸ್ಥಾನಕ್ಕೆ 32 ನಾಮಪತ್ರಗಳು ಸಲ್ಲಿಕೆಯಾಗಿದ್ದು ಮೂರು ಮಹಿಳಾ ನಿರ್ದೇಶಕರ ಸ್ಥಾನಕ್ಕೆ ಪೂರ್ಣಿಮಾ ಪಿ.ರಾವ್, ಕೆ.ರಜನಿ ಹೆಬ್ಬಾರ್, ಡಾಕ್ಟರ್ ವಿಜಯ ವೈ.ಬಿ. ಅವಿರೋಧವಾಗಿ ಆಯ್ಕೆಯಾದರು. ಉಳಿದ ಇಪ್ಪತ್ತನಾಲ್ಕು ನಿರ್ದೇಶಕರ ಸ್ಥಾನಕ್ಕೆ 29 ಮಂದಿ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು. ಮತದಾನದ ಮೂಲಕ 24 ನಿರ್ದೇಶಕರ ಆಯ್ಕೆ ನಡೆಯಿತು.



ಕಡಿಯಾಳಿ ಕೃಷ್ಣ ಪ್ರಜ್ಞಾ ಮಂದಿರದಲ್ಲಿ ನವೆಂಬರ್ 17ರಂದು ನಡೆದ ಭಜನಾ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನ ಪಡೆದ ನಮ್ಮ ಸಂಘದ ಶಾರದಾ ಭಜನಾ ತಂಡದವರಿಗೆ ಅಭಿನಂದನೆಗಳು

## ಸಂಘದ ನೂತನ ಆಡಳಿತ ಮಂಡಳಿ

ಅಧ್ಯಕ್ಷರು



ಕೆ.ಮಂಜುನಾಥ ಹೆಬ್ಬಾರ್

ಕಾರ್ಯದರ್ಶಿ



ಪಿ.ಪ್ರಭಾಕರ ಭಂಡಿ

ಕೋಶಾಧಿಕಾರಿ



ಕೆ. ಗಣೇಶ್ ಹೆಬ್ಬಾರ್

ಉಪಾಧ್ಯಕ್ಷರು



ಯು.ಅರವಿಂದ ಕುಮಾರ್



ಬಿ.ಜಯರಾಮ ರಾವ್

ಜೊತೆ ಕಾರ್ಯದರ್ಶಿಗಳು



ಟಿ.ಜಗದೀಶ ರಾವ್



ವಿನೋದ್ ಕುಮಾರ್

ನಿರ್ದೇಶಕರು



ಕೆ.ವೇಣುಗೋಪಾಲ ರಾವ್



ಸುರೇಶ್ ಶಾನುಭಾಗ್



ಕೊಕ್ರಾಡಿ ಸುರೇಶ್‌ರಾವ್



ಕೃಷ್ಣಕುಮಾರ್ ರಾವ್



ಉಮೇಶ್ ರಾವ್



ಪಿ.ಸತೀಶ್ ರಾವ್



ಕೆ.ಚಂದ್ರಶೇಖರ್ ರಾವ್



ಎಂ.ಸಂತೋಷ್ ರಾವ್



ದಿವಾಕರ ರಾವ್



ಡಾ। ಎಂ.ಶಾಮರಾವ್



ವೈ.ವಿಠ್ಠಲ್ ರಾವ್



ಐ.ಕೆ.ಜಯಚಂದ್ರ ರಾವ್



ಟಿ.ವಿಶ್ವನಾಥ್ ಶಾನುಭೋಗ್



ಮಧುಸೂದನ ರಾವ್



ಮಧುಚಂದ್ರ ಕೊಟ್ಟಾರಿ



ಕೃಷ್ಣಮೂರ್ತಿ ಬ್ರಹ್ಮಾವರ



ಆದರ್ಶ್ ಕುಮಾರ್



ಪೂರ್ಣಿಮಾ ಪಿ.ರಾವ್



ರಜನಿ ಹೆಬ್ಬಾರ್



ಡಾ। ವೈ.ಬಿ.ವಿಜಯ

## ಸಂಪಾದಕೀಯ.....



- ಡಾ। ವೈ.ಸುದರ್ಶನ್ ರಾವ್

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಪ್ರತೀ ಮೂರು ವರ್ಷಗಳಿಗೊಮ್ಮೆ ಆಡಳಿತ ಮಂಡಳಿಯ ಆಯ್ಕೆ ನಡೆಯುತ್ತದೆ. ಶ್ರೀ ಶಾರದಾ ಮಂಟಪವೆಂಬ ಜನಪ್ರಿಯ ಸಭಾಂಗಣ, ಶ್ರೀ ಶಾರದಾ ದೇವಸ್ಥಾನ ಹಾಗೂ ಅದೊನ್ನೊಳಗೊಂಡಿರುವ ಜ್ಞಾನಮಂದಿರ ವೆನ್ನುವ ಇನ್ನೊಂದು ಕಿರುಸಭಾಂಗಣವಿರುವ ಈ ಸಮೂಹ ಕಟ್ಟಡಗಳ ನಿರ್ವಹಣೆಯ ಜೊತೆಗೆ ಉಡುಪಿಯ ಹಾಗೂ ಪ್ರಪಂಚದೆಲ್ಲೆಡೆ ಯಿಂದ ಸದಸ್ಯರನ್ನು ಹೊಂದಿರುವ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಉಡುಪಿ ಇದರ ನಿರ್ವಹಣೆಯ ಜವಾಬ್ದಾರಿಯೂ ಈ ಆಡಳಿತ ಮಂಡಳಿಗಿದೆ. ಹಾಗಾಗಿ ಆಸಕ್ತರು, ಅರ್ಹರು ಎಂಬೀ ಗುಣಗಳ ಜೊತೆಗೆ ಸಂಘದ ಸದಸ್ಯರ ವಿಶ್ವಾಸಕ್ಕೆ ಪಾತ್ರರಾದವರೇ ಇದರ ಆಡಳಿತ ಚುಕ್ಕಾಣಿ ಹಿಡಿಯುವಂತಾಗಬೇಕು ಎಂಬ ಆಶಯದೊಂದಿಗೆ ಮೂರು ವರ್ಷಗಳ ಹಿಂದೆ ಆಮೂಲಾಗ್ರವಾಗಿ ಪುನರ್‌ರಚಿತವಾದ ಸಂಘದ ಬೈಲಾದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಸೇರಿಸಲಾಯಿತು. ಈ ರೀತಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿರುವ ಎರಡನೆಯ ಆಡಳಿತ ಮಂಡಳಿಯಿದು. ಆಯ್ಕೆಯಾಗಿರುವ ನೂತನ ಆಡಳಿತ ಮಂಡಳಿಗೆ ಶುಭಹಾರೈಸೋಣ.

ಶ್ರೀ ಶಾರದಾ ಪತ್ರಿಕೆಯು ಸಂಘದ ಪ್ರಮುಖ ಚಟುವಟಿಕೆಗಳಲ್ಲೊಂದು. ಪ್ರತೀ ತಿಂಗಳು ಹದಿನೈದರಂದು ಪ್ರಕಟವಾಗುವ ಈ ಪತ್ರಿಕೆಯ ಸಂಪಾದಕ ಮಂಡಳಿ ಪ್ರತೀ ಮೂರು ವರ್ಷಗಳಿಗೊಮ್ಮೆ ಬದಲಾಗುತ್ತದೆ. ಬದಲಾವಣೆಯೊಂದಿಗೆ ಪತ್ರಿಕೆಗೆ ಹೊಸತನ, ಹೊಸರೂಪ, ಹೊಸಚಿಂತನೆಗಳ ಲಾಭವು ದೊರಕುವುದರೊಂದಿಗೆ ಪತ್ರಿಕೆ ಇನ್ನಷ್ಟು ಜನಪ್ರಿಯವಾಗಿ ಮುನ್ನಡೆಯುತ್ತದೆ. ಪ್ರಸಕ್ತ ಸಂಪಾದಕ ಮಂಡಳಿಗೆ ಸರ್ವ ರೀತಿಯ ಸಹಕಾರವಿತ್ತಿರುವ ಸಂಘದ ಆಡಳಿತ ಮಂಡಳಿಗೆ, ಓದುಗರಿಗೆ, ಲೇಖಕರಿಗೆ, ಜಾಹೀರಾತುದಾರರಿಗೆ ಹಾಗೂ ಮುದ್ರಕರಿಗೆ ಧನ್ಯವಾದವೀಯುತ್ತಾ ನೂತನ ಸಂಪಾದಕ ಮಂಡಳಿಗೆ ಶುಭಾಶಯ ಕೋರುತ್ತೇವೆ.

## ಸಂಘದ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿಯವರ ಪರಿಚಯ

### ಶ್ರೀ ಮಂಜುನಾಥ ಹೆಬ್ಬಾರ್

ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರು ಕಬ್ಬಿನಾಲೆ ಕುಚ್ಚೂರು ಕೃಷ್ಣ ಹೆಬ್ಬಾರ್ ಮತ್ತು ಶ್ರೀಮತಿ ಪದ್ಮಾವತಿ ದಂಪತಿಗಳ ಪುತ್ರ. ಇವರು ವಾಣಿಜ್ಯ ಪದವೀಧರರಾಗಿದ್ದು, ವಿದ್ಯಾಭ್ಯಾಸದ ನಂತರ 12 ವರ್ಷ ಗೋಲ್ಡ್‌ಸ್ಮಿತ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದರು. ಮುಂದೆ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದು 'ಹೆಬ್ಬಾರ್ ಎಂಟರ್ ಪ್ರೈಸಸ್' ಎಂಬ ಕ್ಯಾಟರಿಂಗ್ ಸಂಸ್ಥೆಯ ಮೂಲಕ ಉಡುಪಿಯ ಆಸುಪಾಸಿನಲ್ಲಿ ಪರಿಚಿತರಾಗಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರಿಯ ಕಾರ್ಯಕರ್ತರಾಗಿ ಸಂಘದ ಪ್ರಾಥಮಿಕ ಶಿಕ್ಷಾವರ್ಗದ ತರಬೇತಿಯನ್ನು ಪಡೆದಿರುತ್ತಾರೆ. ಉಡುಪಿ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯರಾಗಿದ್ದಾರೆ. ಕಡಿಯಾಳಿ ಶ್ರೀ ಮಹಿಷಮರ್ದಿನಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಟ್ರಸ್ಟಿ. ಕೇದಾರೋತ್ಥಾನ ಟ್ರಸ್ಟ್‌ನ ಸದಸ್ಯ. ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಅನೇಕ ವರ್ಷಗಳಿಂದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಇವರ ಪತ್ನಿ ಶ್ರೀಮತಿ ರಜನಿ ಹೆಬ್ಬಾರ್ ಒಳಕಾಡು ವಾರ್ಡಿನ ನಗರಸಭಾ ಸದಸ್ಯರಾಗಿದ್ದು ವಾರ್ಡ್‌ನ ಜನಪ್ರಿಯ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಪುತ್ರಿ ಕು। ವೈಷ್ಣವಿ ವಾಣಿಜ್ಯ ಪದವಿಯನ್ನು ಪಡೆದಿರುತ್ತಾರೆ. ಶ್ರೀಯುತರು ನಮ್ಮ ಸಂಘದಲ್ಲಿ ಯುವ ವಿಭಾಗದ ಸಕ್ರಿಯ ಕಾರ್ಯಕರ್ತರಾಗಿ, ಅದರ ಅಧ್ಯಕ್ಷರಾಗಿ, ಅನೇಕ ವರ್ಷಗಳಿಂದ ಸಂಘದ ನಿರ್ದೇಶಕರಾಗಿ, ಜತೆಕಾರ್ಯದರ್ಶಿಯಾಗಿಯೂ ಈ ಹಿಂದೆ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಸತತ 2ನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

### ಶ್ರೀ ಪಿ. ಪ್ರಭಾಕರ ಭಂಡಿ

ಕಾರ್ಯದರ್ಶಿಗಳಾದ ಶ್ರೀ ಪಿ. ಪ್ರಭಾಕರ ಭಂಡಿ ಪೆರ್ಡೂರು ಇವರು ನಿವೃತ್ತ ಶಿಕ್ಷಕ ಹಾಗೂ ಯೋಗ ಶಿಕ್ಷಕ ಪಿ.ಹರಿನಾರಾಯಣ ಭಂಡಿ ಹಾಗೂ ಕುಸುಮ ದಂಪತಿಗಳ ಪುತ್ರ. MSc, BEd, ಶಿಕ್ಷಣ ಪಡೆದಿರುವ ಇವರು ಪ್ರಸ್ತುತ ಮಣಿಪಾಲ ಪದವಿಪೂರ್ವ ಕಾಲೇಜಿನ ಪದವಿಪೂರ್ವ ವಿಭಾಗದ ಜೀವಶಾಸ್ತ್ರ ಉಪನ್ಯಾಸಕರಾಗಿದ್ದಾರೆ. ಪೆರ್ಡೂರು ಯುವಕ ಸಂಘದ ಸಕ್ರಿಯ ಸದಸ್ಯರಾದ ಇವರು ಯುವಕ ಸಂಘದ ಅಧ್ಯಕ್ಷ ಹಾಗೂ ಕೋಶಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಸೇವೆ ಸಲ್ಲಿಸಿರುತ್ತಾರೆ. ಪೆರ್ಡೂರು ರೋಟರಿ ಸಂಸ್ಥೆಯ ಸದಸ್ಯರಾಗಿ, ಅಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ರೋಟರಿ ಜಿಲ್ಲೆ ಹಾಗೂ ವಲಯ ಮಟ್ಟದಲ್ಲಿ ಕೂಡ ನಾಯಕರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ವೈಜ್ಞಾನಿಕ ಉಪಕರಣಗಳು ಹಾಗೂ ಬೋಧನಾ ಸಲಕರಣೆಗಳ ಪಾಠೋಪಕರಣಗಳ ಮಳಿಗೆಯನ್ನು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪತ್ನಿ ಪ್ರತಿಭಾ ಭಂಡಿ ಹಾಗೂ ಪುತ್ರಿ ಅನನ್ಯ.

### ಶ್ರೀ ಕೆ.ಗಣೇಶ ಹೆಬ್ಬಾರ್

ಕೋಶಾಧಿಕಾರಿಗಳಾದ ಶ್ರೀ ಕೆ.ಗಣೇಶ ಹೆಬ್ಬಾರ್ ಇವರು ಕಬ್ಬಿನಾಲೆ ಕುಚ್ಚೂರು ರಂಗಯ್ಯ ಹೆಬ್ಬಾರ್ ಮತ್ತು ಸುಂದರಿ ಅಮ್ಮನವರ ಪ್ರಥಮ ಪುತ್ರ. ಜನನ ಕಬ್ಬಿನಾಲೆಯಲ್ಲಿ. ಪ್ರಾಥಮಿಕ ವಿದ್ಯಾಭ್ಯಾಸ ಕಬ್ಬಿನಾಲೆ ಹಾಗೂ ಬೆಳ್ವೆಯಲ್ಲಿ ಪ್ರೌಢ ಹಾಗೂ ಪದವಿ ವಿದ್ಯಾಭ್ಯಾಸ ಉಡುಪಿಯಲ್ಲಿ. ಸಿ.ಎ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಪ್ರಸ್ತುತ 2004ರಿಂದ ಸ್ವಂತ ಲೆಕ್ಕಪರಿಶೋಧನಾ ಕಚೇರಿಯನ್ನು ಹೊಂದಿರುತ್ತಾರೆ. ಸುಮಾರು 15 ವರ್ಷಗಳಿಂದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ ಇದರ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಹಲವಾರು ಸಂಘ ಸಂಸ್ಥೆಗಳಿಗೆ ಕೊಡುಗೈ ದಾನಿ. ಧರ್ಮಪತ್ನಿ ಶ್ರೀಮತಿ ಆರತಿ ಹೆಬ್ಬಾರ್, ಪುತ್ರ ಯಜ್ಞವಲ್ಕ ಹೆಬ್ಬಾರ್, ಪುತ್ರಿ ಆರುಷಿ.

## ಪುತ್ತೂರಿನ "ಶಿವಸದನ" ವಿಸ್ತೃತ ಕಟ್ಟಡದ ಉದ್ಘಾಟನೆ



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ "ಶಿವಸದನ" ಇದರ ವಿಸ್ತೃತ ಕಟ್ಟಡದ ಉದ್ಘಾಟನಾ ಸಮಾರಂಭವು ತಾ.14-11-2021ರ ರವಿವಾರದಂದು ನೆರವೇರಿತು. ದೀಪಪ್ರಜ್ವಲನೆ, ದಾನಿಗಳ ಹೆತ್ತವರ ಭಾವಚಿತ್ರ ಅನಾವರಣ ಬಳಿಕ ಸಭಾ ಕಾರ್ಯಕ್ರಮ ನಡೆಯಿತು. ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್‌ರವರ ಪ್ರಾರ್ಥನೆಯ ಬಳಿಕ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಸ್ವಾಗತಿಸಿ ಪ್ರಸ್ತಾವನೆಗೈದರು. ಕಬಕ ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀ ವಿನಯ್ ಕುಮಾರ್ ಕಲ್ಲೆಗ, ದಾನಿಗಳಾದ ಶ್ರೀ ರಾಮಭವನ ವಿಶ್ವನಾಥ ಶೇಟ್, ಉಡುಪಿಯ ಶಸ್ತ್ರಚಿಕಿತ್ಸಾ ತಜ್ಞರಾದ ಡಾ। ವೈ.ಸುದರ್ಶನ್ ರಾವ್, ಭಾರತ್ ಬಿಲ್ಡರ್ಸ್‌ನ ಮಾಲಕರಾದ ಶ್ರೀ ಪ್ರಫುಲ್ಲಚಂದ್ರ ರಾವ್ ಶುಭಾಶಂಸನೆಗೈದರು. ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ। ಎ.ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾದ ಕೋಶಾಧಿಕಾರಿ ಶ್ರೀ ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.





ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

ವೃಂದಾವನ್ ನೆಸ್ಟ್
ಶುದ್ಧ ಸಸ್ಯಾಹಾರಿ
ಎನ್.ಎಚ್. 66, ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೆಲ್ ವೃಂದಾವನ, ಕದ್ರಿ, ಮಂಗಳೂರು
ವಿನೀತ್ ಮೆಡಿಕಲ್ಸ್, ಪಡುಬಿದ್ರಿ
ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ



## ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ (ರಿ) : ವಾರ್ಷಿಕ ಮಹಾಸಭೆ

ದಿನಾಂಕ 28-11-2021 ಭಾನುವಾರ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರ 2020-2021ನೇ ಸಾಲಿನ ಮಹಾಸಭೆ ಶ್ರೀ ಬಾಲ ಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಪ್ರಾಂಗಣದಲ್ಲಿ ಸರಳ ರೀತಿಯಲ್ಲಿ ನಡೆಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಎಂ.ಕೆ ಮೋಹನ್ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವರಾವ್, ಉಪಾಧ್ಯಕ್ಷರಾದ ಶ್ರೀರಾಮ ರಾವ್, ಶ್ರೀ ಮಾಧವರಾವ್, ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ, ಶ್ರೀಮತಿ ಸುಮಿತ್ರ ಸುಬ್ಬರಾವ್, ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ರಾವ್, ಕೋಶಾಧಿಕಾರಿ ಶ್ರೀ ಅರವಿಂದ ರಾವ್, ಜೊತೆ ಕೋಶಾಧಿಕಾರಿ ಶ್ರೀಮತಿ ವೇದಾವತಿ ದಿವಾಕರ್ ರಾವ್, ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ್ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಜನರ್ಧನ್ ರಾವ್ ಉಪಸ್ಥಿತರಿದ್ದರು.

ಶ್ರೀಮತಿ ಶುಭಾ ಜನರ್ಧನ್ ರಾವ್ ಹಾಗೂ ಶ್ರೀಮತಿ ವೇದಾವತಿ ದಿವಾಕರ್ ಅವರ ಪ್ರಾರ್ಥನೆಯೊಂದಿಗೆ ದೀಪ ಬೆಳಗಿಸಿ ಸಭೆ ಆರಂಭಗೊಂಡಿತು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಸ್ವಾಗತಿಸಿ, ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ವರದಿ ಮಂಡಿಸಿ, ಕೋಶಾಧಿಕಾರಿ ಶ್ರೀ ಅರವಿಂದ್ ರಾವ್ ಲೆಕ್ಕಪತ್ರ ಮಂಡಿಸಿದರು. ಸದಸ್ಯರೆಲ್ಲರ ಚಪ್ಪಾಳೆ ಮೂಲಕ ಅನುಮೋದನೆ ಪಡೆಯಲಾಯಿತು. ಈ ಸಂದರ್ಭದಲ್ಲಿ ಶೈಕ್ಷಣಿಕ ಪ್ರತಿಭಾ ಪುರಸ್ಕಾರದ ಪ್ರಯುಕ್ತವಾಗಿ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಪಾಸಾದ ಕುಮಾರಿ ಅಪೇಕ್ಷಾ, ಕುಮಾರಿ ಮೇಘನಾ, ಕುಮಾರಿ ಖುಷಿ ಇವರಿಗೆ ಪ್ರಶಸ್ತಿ ಪತ್ರ, ಗೌರವಧನ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಹಾಗೂ ಪದವಿ ಪೂರ್ವ ಡಿಗ್ರಿ ಹಾಗೂ ಉನ್ನತ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 17 ವಿದ್ಯಾರ್ಥಿಗಳಿಗೆ ರೂ.1,25,000/- ಪ್ರೋತ್ಸಾಹಧನ ವಿತರಿಸಲಾಯಿತು. ಸಂಘವು ಹತ್ತು ವರ್ಷ ಪೂರೈಸಿರುವುದರಿಂದ ಮುಂದಿನ ವರ್ಷ ಅದ್ದೂರಿಯಾಗಿ ಮಹಾಸಭೆ ಹಾಗೂ ದಶಮಾನೋತ್ಸವ ಕಾರ್ಯಕ್ರಮವನ್ನು ಆಚರಿಸುವುದಾಗಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್ ಹಾಗೂ ಅಧ್ಯಕ್ಷರಾದ ಶ್ರೀ ಎಂ.ಕೆ. ಮೋಹನ್ ರಾವ್ ತಿಳಿಸಿದರು ಹಾಗೂ ಸದಸ್ಯರೆಲ್ಲರು ಸಹಕರಿಸಬೇಕಾಗಿ ವಿನಂತಿಸಲಾಯಿತು. ದಾನಿಗಳ ಪಟ್ಟಿಯನ್ನು ಶ್ರೀಮತಿ ಪವಿತ್ರ ಕೃಷ್ಣರಾವ್ ವಾಚಿಸಿ, ಪ್ರೋತ್ಸಾಹಧನ ಪಟ್ಟಿಯನ್ನು ಶ್ರೀ ಜ್ಯೋತಿಂದ್ರನಾಥ್ ವೈ ನಿರ್ವಹಿಸಿ, ಪ್ರತಿಭಾ ಪುರಸ್ಕಾರವನ್ನು ಶ್ರೀಮತಿ ವಾಣಿ ಮಾಧವರಾವ್ ನೆರವೇರಿಸಿ ,ಶ್ರೀ ಮಾಧವರಾವ್ ಇವರ ಧನ್ಯವಾದದೊಂದಿಗೆ ಶ್ರೀ ಎಂ.ಕೆ. ದಿವಾಕರ್ ರಾವ್ ಕಾರ್ಯಕ್ರಮ ಸಂಘಟಿಸಿ ಅರುಣ್ ರಾವ್ ಕಾರ್ಯಕ್ರಮ ನಿರೂಪಿಸಿದರು ಮತ್ತು ನಿರ್ದೇಶಕರೆಲ್ಲರೂ ಸಹಕರಿಸಿದರು.

## "ಗಮಕ ಕಲಾಕುಸುಮ" ಕೃತಿ ಬಿಡುಗಡೆ ಸಮಾರಂಭ

ಕನ್ನಡ ಭಾಷೆಯ ವಿಫುಲ ಸಂಪತ್ತನ್ನು ಪಸರಿಸುವ ಗಮಕ ಕಲೆ ನಾಡಿನಾದ್ಯಂತ ಇನ್ನಷ್ಟು ವಿಸ್ತರಿಸಬೇಕು. ನಮ್ಮಲ್ಲಿ ಪುರಾಣ ಜ್ಞಾನವನ್ನು ಹೆಚ್ಚಿಸುವ ಶಕ್ತಿ ಗಮಕಕಲೆಗಿದೆ. ಇಂದು ಬಿಡುಗಡೆಗೊಂಡ ಗಮಕ ಕಲಾಕುಸುಮ ಕೃತಿಯು ಗಮಕದ ಕುರಿತಂತೆ ಪ್ರಾರಂಭಿಕ ಜ್ಞಾನವನ್ನು ನೀಡುವಲ್ಲಿ ಅತ್ಯಮೂಲ್ಯ ಕೃತಿಯಾಗಿದೆ. ಯುವ ಗಮಕಾಭ್ಯಾಸಿಗಳಿಗೆ ಈ ಕೃತಿ ಉತ್ತಮ ಪ್ರವೇಶಿಕೆಯಾಗಲಿದೆ" ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪ್ರಾಖ್ತನ ಅಧ್ಯಕ್ಷ, ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಎಲ್.ಸಾಮಗ ಹೇಳಿದರು. ಕರ್ನಾಟಕ ಗಮಕ ಕಲಾ ಪರಿಷತ್ತು ಬೆಂಗಳೂರು ಇದರ ಉಡುಪಿ ಜಿಲ್ಲಾ ಘಟಕ ಮತ್ತು ಕೋಟದ ಮಿತ್ರ ಮಂಡಳಿ ಇವರ ಸಹಯೋಗದಲ್ಲಿ ಕೋಟ ಹಿರಿಯ ಪ್ರಾಥಮಿಕ ಶಾ;ಲೆಯ ಸಭಾಂಗಣದಲ್ಲಿ ಶನಿವಾರ ನವಂಬರ್ 20ರಂದು ಆಯೋಜಿಸಿದ ಸತೀಶ್ ಕುಮಾರ್ ಕೆಮ್ಮಣ್ಣು ಅವರ "ಗಮಕ ಕಲಾ ಕುಸುಮ" ಕೃತಿ ಬಿಡುಗಡೆ ಮಾಡಿ ಎಮ್. ಎಲ್ ಸಾಮಗ ಮಾತನಾಡಿದರು.

ಕುಂದಾಪುರ ತಾಲೂಕು ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಸುಜಯೀಂದ್ರ ಹಂದೆ ಎಚ್. ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದು, ಬದುಕಿನಲ್ಲಿ ಹವ್ಯಾಸಗಳು ನಮ್ಮ ಕೊನೆತನಕದ ಗೆಳೆಯರು, ಅನಾದಿಕಾದಿಂದಲೂ ಪ್ರಚಲಿತದಲ್ಲಿದ ಸಂಗೀತ ಮತ್ತು ಸಾಹಿತ್ಯವನ್ನೊಳಗೊಂಡ ಗಮಕಕಲೆ ನಮ್ಮ ಜೀವನದಲ್ಲಿ ಸದಾ ಉತ್ಸಾಹವನ್ನು ತುಂಬುತ್ತದೆ. ಸರಕಾರ ಗಮಕ ಕಲೆಯ ಉಳಿವು ಬೆಳವಣಿಗೆಗೆ ವಿಶೇಷ ಸಹಕಾರ ನೀಡಬೇಕಾದ ಅಗತ್ಯವಿದೆ, ಇಂದು ಬಿಡಿಗಡೆ ಕಂಡ ಕೃತಿ ಹಲವರನ್ನು ತಲುಪಲಿ ಎಂದು ಹಾರೈಸಿದರು. ಮಿತ್ರ ಮಂಡಳಿಯ ಅಧ್ಯಕ್ಷ ಪ್ರೊ.ಚಿತ್ರಪಾಡಿ ಉಪೇಂದ್ರ ಸೋಮಯಾಜಿ, ತಾಲೂಕು ಗಮಕ ಕಲಾ ಪರಿಷತ್ತಿನ ಅಧ್ಯಕ್ಷೆ ಯಾಮಿನಿ ಭಟ್ ಶುಭಶಂಸನೆಗೈದರು. ಉಡುಪಿ ಜಿಲ್ಲಾ ಗಮಕ ಕಲಾ ಪರಿಷತ್ತಿನ ಅಧ್ಯಕ್ಷ ಸತೀಶ್ ಕುಮಾರ್ ಕೆಮ್ಮಣ್ಣು ಸ್ವಾಗತಿಸಿ ಪ್ರಸ್ಥಾವನೆಗೈದರು ಕುಮಾರಿ ಕಾವ್ಯ ಹಂದೆ ಗಮಕ ಶೈಲಿಯಲ್ಲಿ ಪ್ರಾರ್ಥಿಸಿದರು. ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗರು ವಂದಿಸಿದರು. ಅಧ್ಯಾಪಕಿ ಮಹಾಲಕ್ಷ್ಮೀ ಸೋಮಯಾಜಿ ನಿರೂಪಿಸಿದರು. ಗಮಕಿಗಳಾದ ಮಂಜುಳ ಸುಬ್ರಹ್ಮಣ್ಯ ಭಟ್ ಮಂಚಿ ಹಾಗೂ ಡಾ। ರಾಘವೇಂದ್ರ ರಾವ್ ಪಡುಬಿದ್ರಿ ಅವರಿಂದ ರನ್ನನ ಗದಾಯುದ್ಧ ಆಯ್ದ ಪದ್ಯಗಳ ಗಮಕವಾಚನ ಕಾರ್ಯಕ್ರಮ ನೆರವೇರಿತು.

**ವರದಿ : ಶ್ರೀಮತಿ ಸಾವಿತ್ರಿ ಮನೋಹರ್**

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಭಕ್ತಾಭಿಮಾನಿಗಳೇ,

ಸ್ವಸ್ತಿ। ಶ್ರೀ ಪ್ಲವ ನಾಮ ಸಂವತ್ಸರದ ಧನುರ್ಮಾಸ ದಿನ 30 ಸಲುವ ಮಾರ್ಗಶೀರ್ಷ ಅಮಾವಾಸ್ಯೆ ದಿನಾಂಕ 02-01-2022ನೇ ರವಿವಾರದಂದು

## ಎಳ್ಳಮಾವಾಸ್ಯೆ ಉತ್ಸವವು

ಜರಗಲಿರುವುದು. ಶ್ರೀ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಜಗದಾಭಿರಾಮ ಸ್ವಾಮಿ** — ಪ್ರಧಾನ ಅರ್ಚಕರು
**ಪಿ.ರಘುವೀರ ರಾವ್** — ಅಧ್ಯಕ್ಷರು
**ಕರುಣಾಕರ್ ಬೆಳ್ಳೆ** — ಗೌರವ ಅಧ್ಯಕ್ಷರು
**ಶ್ರೀನಿವಾಸ ಶರ್ಮ, ಪಾದೆಬೆಟ್ಟು,** — ಕಾರ್ಯದರ್ಶಿ
**ಪಿ.ಡಿ. ಶೇಖರ ರಾವ್,** — ಖಜಾಂಚಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು**

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್

ಸುರತ್ಕಲ್ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಕಳೆದ 7 ವರ್ಷಗಳಿಂದ ಕ್ರಿಕೆಟ್ ಪಂದ್ಯಾಕೂಟವು ನಮ್ಮ ಸಮಾಜ ಬಾಂಧವರಿಗಾಗಿ ನಡೆಸಿಕೊಂಡು ಬಂದಿರುತ್ತದೆ. ತನ್ನ 8ನೇ ವರ್ಷದ ಕ್ರಿಕೆಟ್ ಪಂದ್ಯಾಕೂಟವನ್ನು ದಿನಾಂಕ 26.12.2021 ನೇ ಆದಿತ್ಯವಾರ ಎನ್.ಎಮ್.ಪಿ.ಟಿ. ಪಣಂಬೂರು ಕ್ರೀಡಾಂಗಣದಲ್ಲಿ ನಡೆಸುವುದಾಗಿ ತೀರ್ಮಾನಿಸಿದ್ದೇವೆ. ಈ ಪಂದ್ಯಾಕೂಟಕ್ಕೆ ಆಗಮಿಸುವ ಕ್ರಿಕೆಟ್ ತಂಡವನ್ನು ದಿನಾಂಕ 18.12.2021 ರ ಒಳಗೆ ನಮ್ಮ ಸಂಘಟಕರಿಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಪಂದ್ಯಾಕೂಟಕ್ಕೆ ಬರುವ ಆಟಗಾರರು ತಮ್ಮ ಆಧಾರ್ ಪ್ರತಿಯನ್ನು ತರಬೇಕು ಮತ್ತು ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

**ಸಂಘಟಕರು : ಕಾರ್ತಿಕ್ ರಾವ್ : 9591662899,**
**ಪ್ರವೀಣ ಕುಮಾರ್ : 9448953331, ಸುಬ್ರಹ್ಮಣ್ಯ : 7259723326**


Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ದೇವಿಕೃಪಾ ಏಜೆನ್ಸೀಸ್, ನಂದಿಕೂರು


ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue

Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013. Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ



–ಡಾ.ಬಿ ಜನಾರ್ದನ ಭಟ್

ಹೀಗೆ ಹರಿದಾಸರಾಗಿ ಊರೂರು ತಿರುಗುವ ಪ್ರಸಂಗ ಒದಗಿದಾಗ, ಈ ಅವಕಾಶಗಳ ಸದ್ಬಳಕೆ ಮಾಡಿಕೊಂಡ ಹರಿದಾಸರು ಅಲ್ಲಲ್ಲಿನ ಗ್ರಾಮದ ದೇವಸ್ಥಾನಗಳನ್ನು ಸಂದರ್ಶಿಸಿ, ಆ ದೇವರ ಕೀರ್ತನೆಯನ್ನು ರಚಿಸಿ ಹಾಡಿ ಆ ಗ್ರಾಮಕ್ಕೆ ದೇವತಾನುಗ್ರಹಕ್ಕಾಗಿ ಪ್ರಾರ್ಥಿಸಿಸುತ್ತಿದ್ದರು. ಇದರಿಂದ ಪ್ರಭಾವಿತರಾದ ಜನ ತಮ್ಮ ತಮ್ಮ ಊರಿಗೆ ಅವರನ್ನು ಕರೆಸಿಕೊಂಡು, ಅವರಿಂದ ಹರಿಕಥೆಯನ್ನು ಮಾಡಿಸಿ, ಆ ದಿನದ ಕಥೆಗೆ ಪೂರಕವಾಗಿ ಅವರು ರಚಿಸಿ ಹಾಡಿದ ಎಲ್ಲಾ ದೇವರ ನಾಮಗಳನ್ನು ಕೈಬರಹದಲ್ಲಿ ಬರೆದಿಟ್ಟು ಮನೆಮನೆಗಳಲ್ಲಿ ಹಾಡುವ ಅಭ್ಯಾಸ ಬೆಳೆಯಿತು. ಆದರೆ ಹರಿದಾಸರು ತಾನಾಗಿ ಯಾವುದೇ ಕೀರ್ತನೆಯನ್ನು ಬರೆದು ರಚಿಸಿ ಸಂಗ್ರಹಿಸಿದ್ದು ದಾಖಲೆಯಿಲ್ಲ.

ಅವರ ಅಪಾರ ಸಂಸ್ಕೃತ ಜ್ಞಾನ, ಆಶುಕವಿತಾ ಶಕ್ತಿ, ಸಂಗೀತ ಜ್ಞಾನ (ಹರಿಕಥೆಯನ್ನು ಮಾಡುವವರು ನಡುನಡುವೆ ಹಾಡುಗಳನ್ನು ಹಾಡುತ್ತಾರೆ, ಹಾಗಾಗಿ ಸಂಗೀತದ ಪಾಠವು ಅವರಿಗೆ ಕಾಶಿ ಮಠದ ಆಶ್ರಯದಲ್ಲಿಯೇ ಆಗಿದ್ದಿರಬೇಕು), ರಾಗ–ತಾಳ–ಲಯದ ಹಿಡಿತ, ವೇದ ಪುರಾಣಗಳ ಅರಿವು, ಇವೆಲ್ಲಕ್ಕಿಂತಲೂ ಭಗವಂತನ ಮೇಲಿನ ಉತ್ಕಟವಾದ ಭಕ್ತಿ, ಪ್ರೇಮ ಇವು ಅವರನ್ನು ತ್ಯಾಗ–ವೈರಾಗ್ಯಮಯ ಜೀವನದತ್ತ ನಡೆಸಿ ನಿಜದ ಹರಿದಾಸ'ರ ಪಟ್ಟಕ್ಕೇರುವಂತೆ ಆಯಿತು.

ಪಾವಂಜೆ ಹರಿದಾಸರ ಲಭ್ಯವಾಗಿರುವ 236 ಕೃತಿಗಳನ್ನು ಈ ಕೆಳಗಿನಂತೆ ವಿಭಾಗೀಕರಿಸಬಹುದು :

ಶ್ರೀ ಗಣಪತಿಪರ (16), ಶ್ರೀ ಸರಸ್ವತಿಪರ (14), ಶ್ರೀ ವಿಷ್ಣುಪರ (96), ಶ್ರೀ ದುರ್ಗಾದೇವಿ ಪರ (27), ಶ್ರೀ ಮುಖ್ಯಪ್ರಾಣ ಪರ (13), ಶ್ರೀ ರುದ್ರ ಪರ (17), ಶ್ರೀ ಸುಬ್ರಹ್ಮಣ್ಯ ಪರ (19), ಶ್ರೀ ನಾಗರಾಜ ಪರ (2), ಶ್ರೀ ಗರುಡ ಪರ (1), ಶ್ರೀ ಕಾಲಭೈರವ ಪರ (3), ಶ್ರೀ ಬ್ರಹ್ಮಪರ (1), ಶ್ರೀ ಷಣ್ಮಹಿಷಿ ಪರ(1), ಶ್ರೀ ಗುರುಗಳ ಪರ (3), ಶ್ರೀ ಜಗದ್ಗುರುಗಳ ಪರ (1), ಕಾರ್ಕಳ ಲಕ್ಷದೀಪೋತ್ಸವ ಹಾಡುಗಳು (100), ಹರಿಕಥಾ ಪ್ರಸಂಗಗಳ ಹಾಡುಗಳು : ದ್ರೌಪದಿ ವಸ್ತ್ರಾಪಹಾರ –ಧ್ರುವ ಚರಿತ್ರೆ–ಪ್ರಹ್ಲಾದ ಚರಿತ್ರೆ–ವಿರಾಟ ಪರ್ವ –ಬಲೀಂದ್ರ ಚರಿತ್ರೆ, ಪತ್ರಲೇಖನಗಳು (5), ಜೋಗುಳ ಹಾಡುಗಳು (1), ಶೋಭಾನೆ ಹಾಡುಗಳು (1), ದೂರುವ ಹಾಡುಗಳು (4), ತುಳು ಹಾಡುಗಳು (4)

**ಶ್ರೀ ಸಂಸಾರಿ ಹರಿದಾಸರು** : ಸಾಂಸಾರಿಕ ಜೀವನದಲ್ಲಿ ಹರಿದಾಸರಿಗೆ ಆಸಕ್ತಿ ಇರಲಿಲ್ಲ. ಆದರೆ ಸಂಬಂಧಿಕರ ಒತ್ತಾಯಕ್ಕೆ ಕಟ್ಟುಬಿದ್ದು ತಮ್ಮ 36ನೇ ಹರೆಯದಲ್ಲಿ (1890) ಗೃಹಸ್ಥರಾದರು. ಮದುವೆಯಾದ ನಾಲ್ಕನೆಯ ವರ್ಷದಲ್ಲಿ ಮೊದಲ ಪತ್ನಿ ನಿಧನಳಾದಳು. ಸಂಬಂಧಿಕರು ಅವರನ್ನು ಅಲ್ಲಿಗೇ ಬಿಡದೆ ಎರಡನೇ ಮದುವೆಗೆ ಒಡಂಬಡಿಸಿದರು. ಎರಡನೆಯ ಪತ್ನಿಯಲ್ಲಿ ಎರಡು ಹೆಣ್ಣು ಮಕ್ಕಳು (ಸೀತಾ ಮತ್ತು ಕೃಷ್ಣವೇಣಿ) ಮತ್ತು ಒಂದು ಗಂಡು ಮಗು ಹುಟ್ಟಿದರು. ಗಂಡು ಮಗು ಅಲ್ಪಕಾಲದಲ್ಲಿಯೇ ತೀರಿಕೊಂಡಿತು. ಹರಿದಾಸರು ಸಂಸಾರದಲ್ಲಿ ಸಂಪೂರ್ಣ ವಿರಕ್ತರಾಗಿ ಯಾರಿಗೂ ತಿಳಿಸದೆ ಏಳೆಂಟು ವರ್ಷಗಳ ಪರ್ಯಂತ ದೇಶ ಪರ್ಯಟನೆ ಮಾಡಿದರು. ಬೈರಾಗಿಗಳ ತಂಡದೊಡನೆ ಅಲೆಯುವುದು, ಕಾಶೀ ಮಠಾಧೀಶರ ಪರಿವಾರದೊಂದಿಗೆ ಸಂಚರಿಸುವುದು, ನಡುನಡುವೆ ಮನೆಗೆ ಬಂದು ಮುಖತೋರಿಸಿ ಹೋಗುವುದು ಮಾಡುತ್ತ ಮನೆಯವರ, ಸಂಬಂಧಿಕರ, ಸ್ವಜನರ ಆದರಾನುರಾಗಗಳನ್ನು ಸಂಪೂರ್ಣವಾಗಿ ಕಳೆದುಕೊಂಡರು. ನಡುನಡುವೆ ಮುಂಬಯಿಯಂತಹ ದೂರದ ಪಟ್ಟಣಗಳಲ್ಲಿ ಹರಿಕಥೆ ಮಾಡಿದ ದಾಖಲೆಗಳಿವೆ. ಹೀಗೆ ಕಾಲಕಳೆಯುತ್ತಾ ಹಣವನ್ನೆಲ್ಲಾ ಕಳೆದುಕೊಂಡು ಕೆಲವು ಸಮಯ ಭಿಕ್ಷುಕನಂತೆ ಕೈಯೊಡ್ಡಿ ಬೇಡುವ ಸ್ಥಿತಿಗೂ ಬಂದಿದ್ದರು.

ಜನರ ಸಂಶಯ ದೃಷ್ಟಿ, ಅನಾದರ, ಅಪವಾದದ ಹೊರೆ, ನಿಂದನೆ, ಭತ್ಸನೆ, ಹಿಂದೆ ಮುಂದೆ ಯಾರೂ ಇಲ್ಲ ಎನ್ನುವ ಅನಾಥ ಭಾವ ಹೀಗೆ ಅವರ ಜೀವನ ಜರ್ಝರಿತವಾಯಿತು. ಇಂಥ ಸಂದರ್ಭದಲ್ಲಿ ಅವರು ದೇವರಿಗೆ ಮೊರೆಯಿಟ್ಟ ಕೀರ್ತನೆಗಳು ಅಪಾರ. ಒಂದು ಸಾರಿ ಹರಿದಾಸರು ಹಸಿದಿದ್ದಾಗ ರಸ್ತೆಬದಿಯ ಅಂಗಡಿಯಲ್ಲಿ ತೂಗುಹಾಕಿದ ಬಾಳೆಹಣ್ಣಿನ ಗೊನೆ ಅವರ ಗಮನ ಸೆಳೆಯಿತು. ಹೊಟ್ಟೆಯೂ ಚುರುಗುಟ್ಟುತ್ತಿತ್ತು. ಅಂಗಡಿಗೆ ಹೋದವರೇ ಹೊಟ್ಟೆ ತುಂಬುವಷ್ಟು ಹಣ್ಣನ್ನು ಸುಲಿದು ತಿಂದರು. ಹಣಕ್ಕಾಗಿ ಜೇಬನ್ನು ತಡಕಾಡಿದಾಗ ಅದು ಬರಿದಾಗಿತ್ತು. ಅಂಗಡಿ ಮಾಲಕ ಹಣಕ್ಕಾಗಿ ಒತ್ತಾಯಿಸಿದಾಗ, ಅವನ ಹೆಸರನ್ನು ಕೇಳಿ, ಶ್ರೀನಿವಾಸ' ಎಂದು ತಿಳಿದಾಗ ತನ್ನ ಆರಾಧ್ಯ ದೈವವೇ ನನ್ನ ಹೊಟ್ಟೆ ತಣ್ಣಗಾಗಿಸಿದನು ಎಂದು ಭಾವಿಸಿ ಅಲ್ಲೇ ಆತನನ್ನು ದೈನ್ಯದಿಂದ ಭಿನ್ನಪಿಸಿದರು.

ಈ ಹಾಡನ್ನು ಪೂರ್ತಿ ಕೇಳಿದ ಅಂಗಡಿಯವನು ಸಂತೋಷದಿಂದ, ಮತ್ತೆರಡು ಬಾಳೆಹಣ್ಣನ್ನು ಕೊಟ್ಟು ನಮಸ್ಕರಿಸಿ ಬೀಳ್ಕೊಟ್ಟನಂತೆ.

ಹರಿದಾಸರು ಹೀಗೆ ಅಲೆದದ್ದು ಸುಮಾರು ಎಂಟು ವರ್ಷಗಳ ಕಾಲ. ಆ ದುರ್ದಿನಗಳು ಕಳೆದ ಮೇಲೆ ಹರಿದಾಸರು ಸುಮಾರು 1905 ರಲ್ಲಿ ಊರಿಗೆ ಮರಳಿದರು. ಬಂದವರು ಮತ್ತೆ ಕಾರ್ಕಳ ವೆಂಕಟರಮಣನ ಸನ್ನಿಧಿಯಲ್ಲಿ ಎಂಟು ತಿಂಗಳುಗಳ ಕಾಲ ಇದ್ದರು. ಹಿಂದೆ ಅವರು ತಾನೇ ಶನಿವಾರ ತಿರುಪತಿಗೆಂದು ಕಾಣಿಕೆ ಹಾಕುತ್ತ ಕಟ್ಟಿಟ್ಟ ಮುಡಿಪನ್ನೇ ಬಡತನದ ಕಾರಣ ತೆಗೆದು ಖರ್ಚು ಮಾಡುವ ಪ್ರಸಂಗವೂ ಅವರಿಗೆ ಎದುರಾಗಿತ್ತು, ಶನಿವಾರ ಒಂದುಹೊತ್ತು ಊಟದ ವ್ರತವೂ ಕೆಟ್ಟಿತು, ವೆಂಕಟರಮಣನಿಗೆ ಮುಡಿಪು ಕಟ್ಟಿ ಇಟ್ಟಿದ್ದ ಹಣವನ್ನು ತಮ್ಮ ಹೊಟ್ಟೆಪಾಡಿಗಾಗಿ ತೆಗೆದುಕೊಂಡಿದ್ದರು, ಅದರಿಂದಾಗಿ ಕಷ್ಟ ಪರಂಪರೆಗಳು ಪ್ರಾಪ್ತವಾದವು ಎನ್ನುವುದು ಬಹುಶಃ ಅವರ ಮನಸ್ಸನ್ನು ಕೊರೆಯ ತೊಡಗಿತ್ತು.

(ಮುಂದುವರಿಯುವುದು...)

*With Best Complimemts From*
SRI M. SHAILESH RAO
Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ನಿಧನ



### ಶ್ರೀಮತಿ ಯು.ಶ್ಯಾಮಲಾ ದೇವಿ

ಕಾಪುವಿನ ನಿವೃತ್ತ ಶಿಕ್ಷಕರಾಗಿದ್ದ ಯು.ಆರ್. ಕುಮಾರಸ್ವಾಮಿಯವರ ಧರ್ಮಪತ್ನಿ ಯು.ಶ್ಯಾಮಲಾ ದೇವಿಯವರು ಪರ್ಕಳದ 80 ಬಡಗಬೆಟ್ಟುವಿನ ಪುತ್ರನ ಮನೆಯಲ್ಲಿ 29–11–2021ರಂದು 90ನೇ ವರ್ಷದಲ್ಲಿ ನಿಧನ ಹೊಂದಿದರು. ಅವರು ಉಡುಪಿ ಶ್ರೀ ಶಾರದಾ ಮಂಟಪದ ನಿಕಟಪೂರ್ವ ಕಾರ್ಯದರ್ಶಿ ಹಾಗೂ ಪ್ರಸ್ತುತ ಉಪಾಧ್ಯಕ್ಷರಾಗಿರುವ ಯು.ಅರವಿಂದ ಕುಮಾರ್, ಅಶೋಕ ಕುಮಾರ್ ಹಾಗೂ ಅಶೀತ್ ಕುಮಾರ್‌ರವರನ್ನು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

**** ****



### ಶ್ರೀ ರತ್ನಾಕರ್ ರಾವ್ ಕೊಕ್ರಾಡಿ

ನಮ್ಮ ಸಮಾಜದ ಹಿರಿಯರಾದ ಶ್ರೀ ರತ್ನಾಕರ್ ರಾವ್ ಕೊಕ್ರಾಡಿ ಇವರು ದಿನಾಂಕ 15–10–2021 ರಂದು ಬೆಳಿಗ್ಗೆ ದೈವಾಧೀನರಾಗಿರುತ್ತಾರೆ. ಇವರು ಪತ್ನಿ, ಮಗಳು ಹಾಗೂ ಮಗನನ್ನು ಅಗಲಿದ್ದಾರೆ.

ಇವರು ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳದ ನಿಕಟಪೂರ್ವ ಅಧ್ಯಕ್ಷರಾಗಿ, ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಆಡಳಿತ ಮುಕ್ತೇಸರರಾಗಿ, ಕಾರ್ಕಳ ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ, ಶ್ರೀ ಶಂಕರ ಸೇವಾ ಸಮಿತಿ, ಕಾರ್ಕಳ ಇದರ ಕಾರ್ಯದರ್ಶಿಯಾಗಿ, ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಇದರ ನಿರ್ದೇಶಕರಾಗಿ, ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಕಾರ್ಕಳ ಇದರ ಸಲಹಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

**** ****



### ಎಲ್ಲೂರು ರತ್ನಾಕರ ರಾವ್

ಎಲ್ಲೂರು ರತ್ನಾಕರ ರಾವ್ (68ವರ್ಷ) ಅವರು ತಾ.16.10.2021ರಂದು ದೈವಾಧೀನರಾಗಿರುತ್ತಾರೆ. ಅವರು ಪ್ರಸಿದ್ಧ ಎಲ್ಲೂರು ಮನೆತನದ ದಿ| ವೆಂಕಟ್ರಮಣಯ್ಯ ಹಾಗೂ ಪದ್ಮಾವತಿ ದಂಪತಿಯರ ಕೊನೆಯ ಪುತ್ರರು. ಶ್ರೀಯುತರು ಪ್ರತಿಷ್ಠಿತ ತಾಂತ್ರಿಕ ವಿದ್ಯಾಲಯ ಕೆ.ಆರ್.ಇ.ಸಿ ಯಲ್ಲಿ ತಾಂತ್ರಿಕ ಪದವಿ ಪಡೆದು ಕರಾಡದಲ್ಲಿ ಡೆಲ್ ಸ್ಟಾರ್ ಕಂಪನಿಯಲ್ಲಿ ಸೇವೆಯಲ್ಲಿ ಇದ್ದರು. ಕೊರೆಗಾಂವ್‌ನಲ್ಲಿ ಓಂ ಜನರಲ್ ಮಳಿಗೆ ಪ್ರಾರಂಭಿಸಿದ್ದರು. ಶ್ರೀಯುತರು ಪತ್ನಿ ದೀಪಾ(ಗೀತ), ಮಗಳಂದಿರಾದ ಅಶ್ವಿನಿ, ಅವಂತಿ, ಅಳಿಯ ಗಣೇಶ್, ಅಶ್ವತ್ ಹಾಗೂ ಮೊಮ್ಮಗ ಶರ್ವಿನ್ ಅವರನ್ನು ಅಗಲಿದ್ದಾರೆ.

## ಶುಭ ಜನನ

ಮೈಸೂರಿನಲ್ಲಿ ನೆಲೆಸಿರುವ ಶ್ರೀಮತಿ ವೀಣಾ ರಾವ್ ಕೋಂ ಶ್ರೀ ಕೃಷ್ಣರಾಜ ರಾವ್, ಕುಕ್ಕೆಹಳ್ಳಿ ಇವರಿಗೆ ಹೆಣ್ಣು ಮಗುವಿನ ಜನನವಾಗಿರುತ್ತದೆ.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4–30ರಿಂದ

**ತಾ.22-12-2021 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.02-01-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.24-12-2021 ಮತ್ತು ತಾ.07-01-2022 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಧನು ಮಾಸದ ವಿಶೇಷ ದಿನಗಳು

| | | | |
|---|---|---|---|
| 15–12–2021 | ಧನು ಸಂಕ್ರಮಣ | 07–01–2022 | ಶುಕ್ರಾಸ್ತ |
| 19–12–2021 | ಹುಣ್ಣಿಮೆ | 08–01–2022 | ಕಿರು ಷಷ್ಠೀ |
| 20–12–2021 | ಹೇಮಂತ ಋತು, ಮಾರ್ಗಶಿರ ಮಾಸದ ಕೃಷ್ಣಪಕ್ಷಾರಂಭ | 09–01–2022 | ಉಡುಪಿ ಸಪ್ತೋತ್ಸವ ಆರಂಭ |
| | | 13–01–2022 | ಸರ್ವೈಕಾದಶಿ |
| 22–12–2021 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 8.53 | 14–01–2022 | ಮಕರ ಸಂಕ್ರಮಣ, ಮುಕ್ಕೋಟಿ ದ್ವಾದಶಿ, ಶುಕ್ರೋದಯ |
| 30–12–2021 | ಸರ್ವೈಕಾದಶಿ | 15–01–2022 | ಉತ್ತರಾಯಣ ಪುಣ್ಯ ಕಾಲ, ಉಡುಪಿ ಚೂರ್ಣೋತ್ಸವ |
| 01–01–2022 | 2022–ಹೊಸ ವರ್ಷಾರಂಭ | | |
| 02–01–2022 | ಎಳ್ಳಮಾವಾಸ್ಯೆ, ಸಮುದ್ರ ಸ್ನಾನ | 17–01–2022 | ಹುಣ್ಣಿಮೆ |
| 03–01–2022 | ಹೇಮಂತ ಋತು, ಪುಷ್ಯ ಮಾಸದ ಶುಕ್ಲ ಪಕ್ಷಾರಂಭ | 18–01–2022 | ಹೇಮಂತ ಋತು, ಪುಷ್ಯ ಮಾಸದ ಕೃಷ್ಣ ಪಕ್ಷಾರಂಭ |

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
✳ Gift Item ✳ Stationary ✳ Xerox ✳ Lamination
✳ Spiral Binding ✳ Mobile & DTC Recharge ✳ Tours & Travels
✳ Courier Service ✳ Sports Items & Toys ✳ Ice Creams

# ಅಭಿನಂದನೆಗಳು



## ಪಿ. ಪ್ರದೀಪ್ ಕುಮಾರ್

(SBI, ex.M.D., ಭಾರತ ಸರ್ಕಾರದ ಬ್ಯಾಂಕ್ ಬೋರ್ಡ್ ಬ್ಯೂರೊ ಸದಸ್ಯರು)

ಕರ್ನಾಟಕದ ಬ್ಯಾಂಕ್‌ನ ಅಧ್ಯಕ್ಷರಾಗಿ
ನೇಮಕಗೊಂಡ ಈ ಸಂದರ್ಭದಲ್ಲಿ ಶುಭಕೋರುವ

**ರವೀಂದ್ರ ರಾವ್ ಐ, ದಿನೇಂದ್ರ ರಾವ್ ಐ.ಎಸ್., ಮಹೇಂದ್ರ ಬಾಬು**

(ದಿ। ಇನ್ನಾ ಶ್ರೀನಿವಾಸ ರಾವ್ ಇವರ ಮಕ್ಕಳು)
(ಮಾಲಿಕರು : ಇನ್ನಾ'ಸ್ ಹೋಟೆಲ್ ಮಹಾಲಕ್ಷ್ಮೀ, ಕೊಳ್ಳೇಗಾಲ)

## ಶ್ರೀ ಬಿ.ವಿ.ಪ್ರಭಾಕರವರಿಗೆ ಸನ್ಮಾನ



ಮುಂಬೈ ಮಹಾನಗರದ ಮಹೇಂದ್ರ ಮತ್ತು ಮಹೇಂದ್ರ ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದು ನಿವೃತ್ತರಾದ ನಂತರ ಮೈಸೂರಿನ ರೂಪಾ ನಗರದ "ಹಸಿರು._ಕೆಂಪು" ಹೆಸರಿನ ತಮ್ಮ ಸ್ವಗೃಹದಲ್ಲಿ ವಾಸಿಸುತ್ತಿರುವ ಶ್ರೀ ಬಿ.ವಿ.ಪ್ರಭಾಕರ ಅವರು 79 ವರ್ಷ ಮುಗಿಸಿ 80 ನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ ಮೈಸೂರಿನ ಶೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಸದಸ್ಯರು ಅವರನ್ನು ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಶ್ರೀ ಪ್ರಭಾಕರ ಅವರು ಸಭೆಯ ವಿದ್ಯಾರ್ಥಿ ವೇತನ ನಿಧಿಗೆ ರೂ 10,000 ಹಾಗೂ ಕಟ್ಟಡ ನಿಧಿಗೆ ರೂ.20,000 ದೇಣಿಗೆ ನೀಡಿ ಸಭಾದ ಚಟುವಟಿಕೆಗಳಿಗೆ ಶುಭ ಕೋರಿದರು.

-: ಶುಭಾಶಯಗಳು :-

**"ಶ್ರೀ ಶಾರದಾಂಬೆಗೆ ವಂದಿಸುತ್ತಾ
"ಶ್ರೀ ಶಾರದಾ" ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ
ದಾರಿದೀಪವಾಗಲಿ" ಎಂದು ಹಾರೈಸುವ**

**ಜಿ.ಕೆ.ಕೋಲ್ವೆ, ಉಡುಪಿ**

ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು,
ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ

## ವಿಳಾಸ ಬದಲಾವಣೆ

ಕರ್ನಾಟಕ ಸರಕಾರದ ನಿವೃತ್ತ ಕಾರ್ಯದರ್ಶಿಗಳಾದ ಶ್ರೀ ಎಲ್ಲೂರು ಉಮೇಶರಾಯರ ವಿಳಾಸ ಬದಲಾಗಿದೆ. ಬದಲಾದ ವಿಳಾಸ ಈ ಕೆಳಗಿನಂತಿದೆ.

**ವೈ.ಉಮೇಶರಾವ್, M.E.,**
ನಿವೃತ್ತ ಕಾರ್ಯದರ್ಶಿ, ಪಿ.ಡಬ್ಲ್ಯೂ.ಡಿ. 143, 'ವಿನ್ಯಾಸ', ನೆಲಮಹಡಿ,
ಪಾಂಡುರಂಗ ನಗರ, ಐಐಯಂ ಎದುರು, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076

★★★★ ★★★★

ಶ್ರೀಮತಿ ಶ್ರೀಲತಾ ಮತ್ತು ಶ್ರೀ ಕೆ. ಪ್ರಕಾಶ್ ರಾವ್ ನೂತನವಾಗಿ ನಿರ್ಮಿಸಿದ ಗೃಹ ಶಾಂತಾಲಯದ ಪ್ರವೇಶೋತ್ಸವವು ಇತ್ತೀಚೆಗೆ ಜರುಗಿದ್ದು, ಅವರ ಪ್ರಸ್ತುತ ವಿಳಾಸ ಈ ಕೆಳಗಿನಂತಿರುತ್ತದೆ.

**ಶ್ರೀಮತಿ ಶ್ರೀಲತಾ ಮತ್ತು ಶ್ರೀ ಕೆ. ಪ್ರಕಾಶ್ ರಾವ್**
"ಶಾಂತಾಲಯ", ಶ್ಯಾಮಿಲಿ ಹಾಲ್ ಎದುರು, 3-2-59, ಡಿ1, ಕಾಳಿಕಾಂಬಾ ನಗರ,
ಅಂಬಲಪಾಡಿ-576103. ಮೊಬೈಲ್ : 9482254796, 9449470196

## ಪಾವಂಜೆ ಯಕ್ಷಗಾನ ಮಂಡಳಿಗೆ ಬೆಳ್ಳಿ ತ್ರಿಶೂಲದ ಸೇವೆ




ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿಗೆ ಕಟಪಾಡಿ ಮೂಡಬೆಟ್ಟು ಆನಂದ ರಾವ್ ಮಕ್ಕಳಾದ ಮಹಾರಾಷ್ಟ್ರದ ಕುಡಾಲ್ ವೆಂಕಟರಮಣ ರಾವ್ ಮತ್ತು ಅವರ ತಮ್ಮ ಉಮೇಶ್ ರಾವ್ ಉಡುಪಿ ಇವರು ಪಾವಂಜೆ ನಾಗವ್ರಜೆ ಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಯಕ್ಷಗಾನ ಮಂಡಳಿಯ ಪ್ರಧಾನ ಸಂಚಾಲಕ ಹಾಗೂ ಪ್ರಧಾನ ಭಾಗವತ ಪಟ್ಲ ಸತೀಶ್ ಶೆಟ್ಟಿ, ಧರ್ಮದರ್ಶಿ ಡಾ.ಯಾಜಿ ನಿರಂಜನ ಭಟ್ ಹಾಗೂ ಮೋಕ್ತೆಸರ ಶಶೀಂದ್ರ ಕುಮಾರ್ ಇವರಿಗೆ ಬೆಳ್ಳಿಯ ತ್ರಿಶೂಲವನ್ನು ಹಸ್ತಾಂತರಿಸಿದರು. ಈ ಸಮಾರಂಭದಲ್ಲಿ ವೆಂಕಟರಮಣರವರ ಪುತ್ರಿ ಶ್ರೀಮತಿ ಆಶಾ ರಾವ್, ಸುಭಾಷ್ ರಾವ್, ಪ್ರಜ್ವಲ ರಾವ್, ಶ್ರೀಪತಿ ರಾವ್ ಹಾಗೂ ಲತಾ ರಾವ್ ಉಪಸ್ಥಿತರಿದ್ದರು.

HARIKRISHNA DIGITALS
5-244-A1, SRIRANGA, First Floor, V. P. Nagar, 3rd Main, Kunjibettu Post - 576102, Udupi District
WE UNDERTAKE
* All types Outdoor and Indoor Photography & Videography
* Pre-wedding shoot * Post-wedding shoot * Passport Photography
* Photo Frames * Digital album creations
* Digitalisation of Old album
* Athorised Udayavani Advertisement Agency
* Offset, Screen, Digital & Banner Printing
* All types of Invitations * Project works of Schools & Colleges
* Book design & printing * Visiting cards
* A4 and A3 Black-White and Colour Printing and Xerox
+91 94487 24161, +91 94816 10371, +91 7019367390 E-mail : harikrishnadigitals2003@gmail.com



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

With Best Compliments From :
BUILDING DREAMS, ENHANCING LIVES.



NAKSHATRA — GANDHINAGAR —
SOLITAIRE — HATHILL, —
HABITAT ONE 54 An Urban Lifestyle — DEREBAIL —
ANANTESSH — CAR STREET, —
Land Trades® BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

## ಶ್ರೀ ಶಾರದಾ ಕ್ರೆಡಿಟ್ ಕೋ.ಅಪರೇಟಿವ್ ಸೊಸೈಟಿ ಉಡುಪಿ : ವಾರ್ಷಿಕ ಮಹಾಸಭೆ



ಶ್ರೀ ಶಾರದಾ ಕ್ರೆಡಿಟ್ ಕೋ. ಅಪರೇಟಿವ್ ಸೊಸೈಟಿ (ನಿ) ಉಡುಪಿ ಇದರ 2020–2021 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ. 20.11.2021ನೇ ಶನಿವಾರ ಮಧ್ಯಾಹ್ನ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಎಂ.ಸದಾನಂದ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಸದಸ್ಯರೆಲ್ಲರನ್ನು ಆತ್ಮೀಯವಾಗಿ ಸ್ವಾಗತಿಸುತ್ತಾ ಅಧ್ಯಕ್ಷರು "ಸತತವಾಗಿ 18ನೇ ವರ್ಷದಲ್ಲಿ ಲಾಭಗಳಿಸುತ್ತಾ ಬಂದಿರುವ ಸಂಸ್ಥೆ, 20 ವರುಷಗಳ ಸಾರ್ಥಕ ವ್ಯವಹಾರವನ್ನು ಪೂರ್ಣಗೊಳಿಸಿ 21ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸಂಘವು ವರದಿ ಸಾಲಿನಲ್ಲಿ ಸದಸ್ಯರಿಂದ 26.06 ಲಕ್ಷ ಪಾಲು ಬಂಡವಾಳ ಹಾಗೂ 21.63 ಕೋಟಿ ಠೇವಣಿ ಸಂಗ್ರಹಿಸಿದೆ. ಹಾಗೂ 16.77 ಕೋಟಿ ಸಾಲ ನೀಡಿದ್ದು 24.76 ಲಕ್ಷ ನಿವ್ವಳ ಲಾಭಗಳಿಸಿದೆ. ಪ್ರಸಕ್ತ ಸಂಘವು 23.12 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು ಸಂಘದ ಸದಸ್ಯರಿಗೆ ಶೇ 10% ಡಿವಿಡೆಂಡ್ ಘೋಷಿಸುತ್ತಿದ್ದೇವೆ. ನಮ್ಮ ಎಲ್ಲಾ ಠೇವಣಿದಾರರ ತುಂಬು ಹೃದಯದ ಸಹಕಾರವನ್ನೂ, ಮುಂದೆಯೂ ಅವರ ಬೆಂಬಲ ಕೋರುತ್ತೇವೆ. ಆದರೆ ಈ ಸಾಲಿನಲ್ಲಿ ನಮ್ಮ ನಿರೀಕ್ಷೆಯಂತೆ ವ್ಯವಹಾರ ವೃದ್ಧಿಯಾಗಿಲ್ಲ. ಇದಕ್ಕೆ ದೇಶದಲ್ಲಿನ ಪರಿಸ್ಥಿತಿಯೂ ಕಾರಣವಾಗಿದೆ. ಇಂತಹ ಸಮಸ್ಯೆ ನಮ್ಮದು ಮಾತ್ರವಲ್ಲ ದೇಶದಲ್ಲಿನ ವ್ಯಾಪಾರ/ವಾಣಿಜ್ಯ ಚಟುವಟಿಕೆ ಇತ್ಯಾದಿಗಳಲ್ಲಿ ಅಭಿವೃದ್ಧಿ ಇಳಿಮುಖವಾಗಿದೆ. ಈ ಪರಿಸ್ಥಿತಿ ಕ್ರಮೇಣ ಸುಧಾರಿಸಬಹುದು ಎಂಬ ವಿಶ್ವಾಸದಲ್ಲಿದ್ದೇವೆ. ಪ್ರಸಕ್ತ ಸಾಲಿನ ಸಂಕ್ಷಿಪ್ತ ವರದಿ ಮತ್ತು ಲೆಕ್ಕ ಪತ್ರಗಳನ್ನು ನಿಮ್ಮ ಮುಂದಿಟ್ಟಿದ್ದೇವೆ. ಮಾನ್ಯ ಸದಸ್ಯರು ಅವುಗಳನ್ನು ಪರಿಶೀಲಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕಾಗಿ ಕೋರುತ್ತೇವೆ" ಎಂದರು. 2020–21 ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ 2020–21 ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು, 2021–22 ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು, ಲೆಕ್ಕ ಪರಿಶೋಧಕರ ನ್ಯೂನ್ಯತೆಗಳಿಗೆ ಅನುಪಾಲನಾ ವರದಿಯನ್ನು, 2021–22 ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನಾಗಿ ಕೆ.ಗಣೇಶ್ ಹೆಬ್ಬಾರ್, ಸನ್ನದು ಲೆಕ್ಕಪರಿಶೋಧಕರು ಇವರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾಪವನ್ನು ಕಾರ್ಯದರ್ಶಿ ಎಸ್. ಪಟ್ಟಾಭಿರಾಮ ರಾವ್ ಇವರು ಸಭೆಯ ಮುಂದಿಟ್ಟರು. ಮಹಾಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ವೇದಿಕೆಯಲ್ಲಿ ಉಪಾಧ್ಯಕ್ಷರಾದ ಯು. ಅರವಿಂದ ಕುಮಾರ್ ಹಾಗೂ ನಿರ್ದೇಶಕರಾದ ಯು. ಪ್ರಫುಲ್ಲಚಂದ್ರ ರಾವ್, ಕೃಷ್ಣಮೂರ್ತಿ ರಾವ್, ವೈ. ವಿಠಲ್ ರಾವ್, ಎಂ. ಪದ್ಮಾನಂದ ರಾವ್, ಹರಿಣಾಕ್ಷಿ ಎನ್.ರಾವ್, ವೇದಾವತಿ ಡಿ. ರಾವ್, ಸಲಹೆಗಾರರಾದ ಎಂ.ಕೆ. ದಿವಾಕರ ರಾವ್, ಉದಯ ಬಿ. ರಾವ್ ಉಪಸ್ಥಿತರಿದ್ದರು. ಶಾಖಾ ವ್ಯವಸ್ಥಾಪಕಿ ಸೌಮ್ಯಲತಾರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

## ಡಾ। ಅಶ್ವಿನಿ ಇವರಿಗೆ ಪಿ.ಹೆಚ್.ಡಿ ಪದವಿ ಪ್ರದಾನ



ಡಾ। ಅಶ್ವಿನಿ, ಅಸೋಸಿಯೇಟ್ ಪ್ರೊಫೆಸರ್, K.S. Hegde Medical College, Deralakatte, Mangalore. ಇವರು ಮಂಡಿಸಿದ "Association of Maternal Psychological Stress with Changes in Insulin Resistance During Antenatal and Postnatal Periods" ಎಂಬ ಸಂಶೋಧನಾ ಪ್ರಬಂಧಕ್ಕೆ ನಿಟ್ಟೆ ಡೀಮ್ಡ್ ಟು ಬಿ ಯುನಿವರ್ಸಿಟಿ ಡಾಕ್ಟರೇಟ್ (Ph.D.) ಪದವಿ ನೀಡಿದೆ. ಇವರಿಗೆ ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿಯ ಫಿಸಿಯಾಲಜಿ ವಿಭಾಗದ ಅಡಿಶನಲ್ ಪ್ರೊಫೆಸರ್ ಡಾ। ಶೈಲಜಾ ಎಸ್. ಮೂಡಿತ್ತಾಯರವರು ಮಾರ್ಗದರ್ಶನ ನೀಡಿದ್ದಾರೆ.

ಡಾ। ಅಶ್ವಿನಿ ಇವರು ಮಂಗಳೂರಿನ ದೇರಳಕಟ್ಟೆಯಲ್ಲಿರುವ ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿಯ ಪೆಥಾಲಜಿ ವಿಭಾಗದ ಪ್ರೊಫೆಸರ್ ಡಾ। ಎಚ್.ಎಲ್.ಕಿಶನ್ ಪ್ರಸಾದ್ (M.D.) ಇವರ ಧರ್ಮಪತ್ನಿ ಹಾಗೂ ಪಡುಬಿದ್ರಿಯ ಡಾ। ಅರವಿಂದ ಶಾಸ್ತ್ರಿ ಮತ್ತು ಶ್ರೀಮತಿ ಸುಕನ್ಯಾ ಶಾಸ್ತ್ರಿ ಇವರ ಪುತ್ರಿ. ಇವರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011–12ರಿಂದ 2016–17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☏ 2522408) ಪಡುಬಿದ್ರಿ ಶಾಖೆ (☏ 2556608) ಕೋಟೇಶ್ವರ ಶಾಖೆ (☏ 9341854114) ಬ್ರಹ್ಮಾವರ ಶಾಖೆ (☏ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ


## ನೂತನ ವಧೂವರರಿಗೆ ಅಭಿನಂದನೆಗಳು



**ಚಿ। ರಜತ್ ಹಾಗೂ ಚಿ। ಸೌ। ಐಶ್ವರ್ಯ**

ತಾ.05.12.2021ನೇ ರವಿವಾರ ಪುತ್ತೂರು ಬೈಪಾಸ್‌ನಲ್ಲಿರುವ ಒಕ್ಕಲಿಗ ಗೌಡ ಸಭಾಭವನದಲ್ಲಿ ಜರಗಿದ ವಿವಾಹ ಮಹೋತ್ಸವ ಹಾಗೂ ತಾ.06–12–2021ರ ಸೋಮವಾರದಂದು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇಲ್ಲಿ ಜರುಗಿದ ನೂತನ ವಧೂವರರ ಗೃಹಪ್ರವೇಶದ ಔತಣ ಕೂಟಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

ಶುಭ ಕೋರುವ

ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಬನ್ನಂಜೆ ಶಿವರಾಜ ರಾವ್ ಹಾಗೂ ಕು। ರಶ್ಮಿ
ಶ್ರೀಮತಿ ಸಹನಾ ಮತ್ತು ಶ್ರೀ ಎನ್. ಕುಮಾರ ಸ್ವಾಮಿ, ಪುತ್ತೂರು

## ನೂತನ ವಧೂವರರಿಗೆ ಅಭಿನಂದನೆಗಳು



**ಚಿ। ವಾಗೀಶ ರಾವ್ ಟಿ. ಹಾಗೂ ಚಿ। ಸೌ। ಶಾರ್ವರಿ ಪಿ.ಎಸ್.**

ತಾ.08.12.2021ನೇ ಬುಧವಾರ ಶ್ರೀರಂಗಪಟ್ಟಣದ ಜೆ.ಎಂ.ಕನ್ವೆನ್‌ಷನ್ ಸೆಂಟರ್ ಹಾಲ್ ಇಲ್ಲಿ ಜರುಗಿದ ವಿವಾಹ ಮಹೋತ್ಸವ ಹಾಗೂ ತಾ.12–12–2021ರ ರವಿವಾರದಂದು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇಲ್ಲಿ ಜರುಗಿದ ನೂತನ ವಧೂವರರ ಗೃಹಪ್ರವೇಶದ ಔತಣ ಕೂಟಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

ಶುಭ ಕೋರುವ

ಶ್ರೀಮತಿ ಶಶಿಕಲಾ ಮತ್ತು ಶ್ರೀ ಸುರೇಶ್ ರಾವ್ ಟಿ., ಉಡುಪಿ
ಶ್ರೀಮತಿ ಸ್ವಾತಿ ಮತ್ತು ಶ್ರೀ ಸಂದೀಪ್ ರಾವ್, ಕು। ಸಮನ್ವಿ, ಬೆಂಗಳೂರು
ಶ್ರೀಮತಿ ಆರ್.ಸುಧಾ ಶ್ರೀಧರ
ಶ್ರೀಮತಿ ಜೀವಿತಾ ಮತ್ತು ಶ್ರೀ ಶೈಲೇಶ್ ಪಿ.ಎಸ್.,
ಮಾ। ತನುಷ್ ಸ್ಕಂದ, ಶ್ರೀರಂಗಪಟ್ಟಣ

Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org